ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

**E-mail ID: icpssarakar@gmail.com** **Ph.No.080-22879382**

ಸಂಖ್ಯೆ: ಐಸಿಪಿಎಸ್/ದತ್ತು-24/2015-16 ದಿನಾಂಕ:06-04-2018

**ಸುತ್ತೋಲೆ**

ವಿಷಯ: ದತ್ತು ನೀಡಲು ಒಪ್ಪಿಸಲ್ಪಟ್ಟ (surrendered) ಮಕ್ಕಳಿಗೆ ಅನುಸರಿಸಬೇಕಾದ ನಿಯಮಗಳ ಕುರಿತು ಕೋರಿದ ಸ್ಪಷ್ಟೀಕರಣಕ್ಕೆ ಸಂಬಂಧಿಸಿದಂತೆ

ಉಲ್ಲೇಖ: ದಿನಾಂಕ 21.03.2018 ರಂದು ನಡೆದ ರಾಜ್ಯ ಮಟ್ಟದ ದತ್ತು ತರಬೇತಿ ಕಾರ್ಯಕ್ರಮದಲ್ಲಿ ಚರ್ಚಿಸಿದಂತೆ.

* * * * *

ದತ್ತು ಅಧಿಸೂಚನೆ **ಸೆಕ್ಷನ್ 7** ಹಾಗು ಬಾಲನ್ಯಾಯ ಕಾಯಿದೆ **ಸೆಕ್ಷನ್ 35 ಹಾಗು 36ರಲ್ಲಿ** ದತ್ತು ನೀಡಲು ಒಪ್ಪಿಸಲ್ಪಟ್ಟ ಮಕ್ಕಳನ್ನು ದತ್ತು ಪ್ರಕಿಯೆಗೆ ಒಳಪಡಿಸಲು ಅನುಸರಿಸಬೇಕಾದ ನಿಯಮಗಳನ್ನು ವಿವರವಾಗಿ ತಿಳಿಸಿದೆ.

ದತ್ತು ಅಧಿಸೂಚನೆ **ಸೆಕ್ಷನ್ 7(3)ರ** ಅನ್ವಯ ಮುಖ್ಯವಾಗಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಒಪ್ಪಿಸಲು ಬಂದ ದಿನವೇ ಆಪ್ತ ಸಮಾಲೋಚನೆಯಲ್ಲಿ 60 ದಿನಗಳ ಕಾಲಾವಕಾಶದ ಮಾಹಿತಿಯನ್ನು ನೀಡಿ ಮಗುವನ್ನು ಹಿಂಪಡೆಯಲಿರುವ ಅವಕಾಶವನ್ನು ತಿಳಿಸಬೇಕು ಮತ್ತು ಅದೇ ದಿನವೇ ಸರೆಂಡರ್ ಡೀಡ್‌ನ್ನು ಅಧಿಕೃತ ಬಾಂಡ್/ಇ-ಸ್ಟಾಂಪ್‌ನಲ್ಲಿ ಪೋಷಕರ/ತಾಯಿ/ತಂದೆ ಸಹಿಯನ್ನು ಪಡೆಯಬೇಕು.

ದತ್ತು ಅಧಿಸೂಚನೆ **ಸೆಕ್ಷನ್ 7(4)ರ** ಅನ್ವಯ ಅವಿವಾಹಿತ ಸ್ತ್ರೀ/ವಿವಾಹ ಬಾಹಿರವಾಗಿ ಮಗು ಪಡೆದ ತಾಯಿ ಮಗುವನ್ನು ಒಪ್ಪಿಸಲು ಬಂದರೆ, ಮಕ್ಕಳ ಕಲ್ಯಾಣ ಸಮಿತಿಯ ಒರ್ವ (ಆದ್ಯತೆಯ ಮೇರೆಗೆ ಮಹಿಳಾ ಸದಸ್ಯರ) ಸದಸ್ಯರ ಉಪಸ್ಥಿತಿಯಲ್ಲಿ ಸರೆಂಡರ್ ಡೀಡ್‌ನ್ನು ಪಡೆಯುವುದು.

ಮುಂದುವರೆದಂತೆ ದತ್ತು ಅಧಿಸೂಚನೆ **ಸೆಕ್ಷನ್** 7(6) ರ ಅನ್ವಯ, ಮಗುವನ್ನು ಒಪ್ಪಿಸಲು ದಂಪತಿಗಳಲ್ಲಿ ಒಬ್ಬ ಪೋಷಕರು ಮುಂದೆ ಬಂದಿದ್ದು, ಇನ್ನೊಬ್ಬ ಪೋಷಕರ ಇರುವಿಕೆಯು ತಿಳಿಯದಿದ್ದಲ್ಲಿ (the where abouts of the other parent are not known) ಅಂತಹ ಪ್ರಕರಣಗಳಲ್ಲಿ ಮಗುವನ್ನು ಪರಿತ್ಯಕ್ತ ಮಗುವೆಂದು ಭಾವಿಸಿ ದತ್ತು ಅಧಿಸೂಚನೆ **ಸೆಕ್ಷನ್ 6** ರ ಅನ್ವಯ ಪರಿತ್ಯಕ್ತ ಮಗುವಿಗೆ ಅನುಸರಿಸಬೇಕಾದ ನಿಯಮಗಳನ್ನು ಅನುಸರಿಸಿ ಮಗುವನ್ನು ದತ್ತು ಪ್ರಕಿಯೆಗೆ ಒಳಪಡಿಸಬೇಕಿರುತ್ತದೆ.

ದತ್ತು ಅಧಿಸೂಚನೆ –2017 ರ **ಸೆಕ್ಷನ್ 7(5)** ರನ್ವಯ ವಿವಾಹಿತ ದಂಪತಿಗಳಿಗೆ ಹುಟ್ಟಿದ ಮಗುವನ್ನು ಒಪ್ಪಿಸಲ್ಪಡುವ (surrender) ಸಂದರ್ಭದಲ್ಲಿ ದಂಪತಿಗಳಿಬ್ಬರೂ ಸರೆಂಡರ್ ಡೀಡ್‌ಗೆ ಸಹಿ ಮಾಡಬೇಕಿರುತ್ತದೆ. ಒಂದು ವೇಳೆ ಒಬ್ಬರು ಮರಣ ಹೊಂದಿದ್ದರೆ ಮರಣದ ಪ್ರಮಾಣ ಪತ್ರವನ್ನು ಒದಗಿಸಬೇಕಿರುತ್ತದೆ ಎಂದು ತಿಳಿಸಿದ್ದು, ಅದರಂತೆ ಕ್ರಮ ವಹಿಸುವಂತೆ ಈ ಮೂಲಕ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದತ್ತು ಅಧಿಸೂಚನೆಯ **ಸೆಕ್ಷನ್ 7 ಮತ್ತು 8 ನ್ನು** ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ,

ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ
ಸೊಸೈಟಿ, ಬೆಂಗಳೂರು.

ಪ್ರತಿಯನ್ನು:-

1. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರುಗಳಿ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ಎಲ್ಲಾ ವಿಶೇಷ ದತ್ತು ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.